ಉಂಟಾದ ರೈತರ ಬೆಳೆಗಳ ನಷ್ಟಕ್ಕೆ, ಕಾಡಾನೆಗಳ ದಾಳಿಯಿಂದ ಗಾಯಗೊಂಡವರಿಗೆ ಹಾಗೂ ಮೃತಪಟ್ಟ ವಾರಸುದಾರರಿಗೆ ಪರಿಹಾರ/ದಯಾತ್ಮಕ ಧನವನ್ನು ನೀಡಲಾಗುತ್ತಿದೆ.

ಆಸ್ಪತ್ರೆಯನ್ನು ಸ್ಥಳಾಂತರಿಸುವುದು

397 (860) ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿಯ, ಗೊರೂರು ಗ್ರಾಮದಲ್ಲಿ ನೀರಾವರಿ ಇಲಾಖೆಯವರು ನಿರ್ವಹಣೆ ಮಾಡುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಈ ಕೇಂದ್ರಕ್ಕೆ ರೋಗಿಗಳು ಬಾರದೇ ನಿರುಪಯುಕ್ತವಾಗಿರುವುದರಿಂದ ಇಲಾಖೆಯವರು ಸ್ಥಳಾಂತರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ;

(ಇ) ಹಾಗಿದ್ದಲ್ಲಿ ಈ ಕೇಂದ್ರವನ್ನು ಗೊರೂರಿನಿಂದ 8 ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ ಕಟ್ಟಾಯ ಗ್ರಾಮಕ್ಕೆ ಸ್ಥಳಾಂತರಿಸುವ ಉದೇಶ ಸರ್ಕಾರಕ್ಕಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು)

(ಅ) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 338 ಎಸ್‌ಸಿಓ 68, ದಿನಾಂಕ: 16–06–1969, ರಲ್ಲಿ ಹೇಮಾವತಿ ವಸಾಹತು ಕಾಲೋನಿ ಗೊರೂರುನಲ್ಲಿ ಹೇಮಾವತಿ ಜಲಾಶಯ ಆಸ್ಪತ್ರೆಯನ್ನು ಸ್ಥಾಪನೆ ಮಾಡಲಾಗಿರುತ್ತದೆ.

(ಆ) ಹೇಮಾವತಿ ಜಲಾಶಯ ಆಸ್ಪತ್ರೆಯನ್ನು ಮಾತೃ ಇಲಾಖೆಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವಹಿಸಿಕೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಕೋರಲಾಗಿರುತ್ತದೆ.

(ಇ) ಹೇಮಾವತಿ ಜಲಾಶಯ ಆಸ್ಪತ್ರೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವಹಿಸಿಕೊಂಡ ನಂತರ ಸ್ಥಳಾಂತರಿಸುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಶೀತಪೀಡಿತ ಹಳ್ಳಿಗಳು

398 (861) ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹಾಸನ ಜಿಲ್ಲೆಯ ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 7 ಹಳ್ಳಿಗಳು ಹೇಮಾವತಿ ಜಲಾಶಯದ ಹಿನ್ನೀರಿನ ಶೀತಪೀಡಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಹಳ್ಳಿಗಳನ್ನು ಸ್ಥಳಾಂತರಿಸಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು)

(ಅ) ಹಾಸನ ಜಿಲ್ಲೆ, ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ ಈ ಕೆಳಕಂಡ 17 ಗ್ರಾಮಗಳು ಹೇಮಾವತಿ ಜಲಾಶಯ ಹಿನ್ನೀರಿನಿಂದ ಶೀತಪೀಡಿತವಾಗಿದೆ ಎಂದು ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು ಸ್ಥಳಾಂತರಿಸಲು ಮನವಿಯನ್ನು ಸಲ್ಲಿಸಿದ್ದು, ಸದರಿ ಅಂಶವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕ್ರ.ಸಂ	ತಾಲ್ಲೂಕು	ಗ್ರಾಮ
1	ಹಾಸನ	ಮುಟ್ಟೇನಹಳ್ಳಿ ಕೊಪ್ಪಲು
2		ಸುಳಗೋಡು
3		ರಾಮೇನಹಳ್ಳಿ
4		ಕಿತಬೂರು
5		ಮಣಿಗನಹಳ್ಳಿ
6		ಕಡಬಗಾಲ
7		ಕೆರೆ ಕೊಪ್ಪಲು
8	ಆಲೂರು	ಹೊಳೆ ಕೊಪ್ಪಲಿ
9		ಹುಲುಕುಂದ (ಮಾದಿಹಳ್ಳಿ)
10		ಹೆಮ್ಮಿಗೆ
11		ಕಾಗನೂರು
12		ಕಾಗನೂರು ಕೊಪ್ಪಲು
13		ಕಿತಗೆರೆ

14		ಕುರುಗಾಲು
15		ನಳ್ಳಳ್ಳಿ
16	ಸಕಲೇಶಪುರ	ಬೆಳ್ಳೂರು
17		ನಿಡಿಗೆರೆ

(ಆ) ಹೇಮಾವತಿ ಮತ್ತು ಯಗಚಿ ಯೋಜನೆಗಳಡಿಯಲ್ಲಿ ಶೀತಪೀಡೀತವಾಗಿದೆ ಎಂದು ಹೇಳಲಾಗಿರುವ ಗ್ರಾಮಗಳ ಸ್ಥಳ ತನಿಖೆ ನಡೆಸಿ ಶೀತಪೀಡಿತವಾಗುವುದನ್ನು ತಡೆಗಟ್ಟಲು ಇರುವ ತಾಂತ್ರಿಕ ಹಾಗೂ ಇತರೆ ಬದಲಿ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ, ಸೂಕ್ತ ಪರಿಹಾರೋಪಾಯಗಳೊಂದಿಗೆ ಗ್ರಾಮಗಳನ್ನು ಸ್ಥಳಾಂತರಿಸುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಕಂಇ 215 ಆರ್ ಇಹೆಚ್ 2008, ದಿನಾಂಕ: 11-12-2008, ರಂತೆ ಪ್ರಾದೇಶಿಕ ಆಯುಕ್ತರು, ಮೈಸೂರು ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

ದಿನಾಂಕ: 31-12-2009 ರಂದು ಪ್ರಾದೇಶಿಕ ಆಯುಕ್ತರು, ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯನ್ವಯ ಶೀತಪೀಡಿತವೆಂದು ಹೇಳಲಾಗಿರುವ ಗ್ರಾಮಗಳನ್ನು ತನಿಖೆ ಮಾಡಿ ಚೆಕ್‌ಲಿಸ್ಟ್‌ಗಳಲ್ಲಿ ಮಾಹಿತಿ ಪಡೆಯಲು ಈ ಕೆಳಕಂಡಂತೆ ಕಾವೇರಿ ನೀರಾವರಿ ನಿಗಮದಿಂದ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ.

1.	ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್	ಸಮಿತಿಯ ತಂಡದ ಮುಖ್ಯಸ್ಥರು
2.	ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ	ಸದಸ್ಯರು
3.	ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ (ಅಂತರ್ಜಲ) ಇಲಾಖೆ	ಸದಸ್ಯರು
4.	ಜಂಟಿ ನಿರ್ದೇಶಕರು, ಕೃಷಿ ಇಲಾಖೆ.	ಸದಸ್ಯರು
5.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.	ಸದಸ್ಯರು
6.	ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ.	ಸದಸ್ಯರು

7.	ಉಪ ನಿರ್ದೇಶಕರು, ಪಶುಸಂಗೋಪನಾ ಮತ್ತು ಪಶುಪಾಲನಾ ಇಲಾಖೆ	ಸದಸ್ಯರು
8.	ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ (ಸಂಬಂಧಿಸಿದ ತಾಲ್ಲೂಕು)	ಸದಸ್ಯರು
9.	ತಹಸೀಲ್ದಾರ್ (ಸಂಬಂಧಿಸಿದ ತಾಲ್ಲೂಕು)	ಸದಸ್ಯರು
10.	ಹವಾಮಾನ ಇಲಾಖೆ ಪ್ರತಿನಿಧಿಗಳು	ಸದಸ್ಯರು

ಹೇಮಾವತಿ ಜಲಾಶಯದ ಹಿನ್ನೀರಿನಿಂದ ಶೀತಪೀಡಿತವಾಗಿದೆ ಎಂದು ಹೇಳಲಾಗಿರುವ 17 ಹಳ್ಳಿಗಳಿಗೆ ಸಂಬಂಧಪಟ್ಟಂತೆ ಉಪ ಸಮಿತಿಯಿಂದ ಚೆಕ್‌ಲಿಸ್ಟ್ ಗಳಲ್ಲಿ ಮಾಹಿತಿಯನ್ನು ಪಡೆದು ಪ್ರಸ್ತಾವನೆಯನ್ನು ಹಾಗೂ ಗ್ರಾಮಗಳನ್ನು ಶೀತಪೀಡಿತವೆಂದು ತೀರ್ಮಾನಿಸಲು ಸೂಕ್ತ ಮಾರ್ಗಸೂಚಿಗಳನ್ನು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು, ಇವರಿಗೆ ಕಳುಹಿಸಿದೆ.

ಹಾಸನ ಜಿಲ್ಲೆಯ ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿರುವ ಪ್ರಸ್ತಾಪಿತ ಗ್ರಾಮಗಳ ಸ್ಥಳ ಪರಿಶೀಲನೆಯನ್ನು ಉನ್ನತ ಮಟ್ಟದ ಸಮಿತಿ ಕೈಗೊಳ್ಳುತ್ತಿದ್ದು, ಸಮಿತಿಯಿಂದ ವರದಿಯನ್ನು ನಿರೀಕ್ಷಿಸಿದೆ. ಸಮಿತಿಯ ವರದಿಯನ್ನಾಧರಿಸಿ ಮುಂದಿನ ಕ್ರಮವನ್ನು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಕೈಗೊಳ್ಳಲಾಗುವುದು.

ತೈಲ ಸಂಸ್ಕರಣ ಘಟಕ

399 (158) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಕಾಪು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪಾದೂರು ಬಳಿ ನಿರ್ಮಿಸಲು ಉದ್ದೇಶಿಸಿರುವ ತೈಲ ಸಂಸ್ಕರಣ ಘಟಕಕ್ಕೆ ಸರ್ಕಾರ ಮಂಜೂರು ಮಾಡಿರುವ ಜಮೀನಿನ ವಿಸ್ತೀರ್ಣ ಎಷ್ಟು;

(ಆ) ಆ ತೈಲ ಸಂಸ್ಕರಣ ಘಟಕದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಲಾಗುವುದೇ;

(ಇ) ಈ ಸಂಸ್ಕರಣ ಘಟಕದ ಉದ್ದೇಶವೇನು ಹಾಗೂ ಇದರಿಂದ ಸಾರ್ವಜನಿಕರಿಗೆ ದೊರಕುವ ಉಪಯೋಗಗಳಾವುದು;

(ಈ) ಈ ಸಂಸ್ಕರಣ ಘಟಕದ ಪೈಪ್ ಲೈನ್ ಅಳವಡಿಕೆಯನ್ನು ಯಾವ ಮಾರ್ಗದಿಂದ ತೆಗೆದುಕೊಳ್ಳಲಾಗುವುದು